ರಾಜ್ಯದಲ್ಲಿ ಅನೇಕ ಆಶ್ರಮಗಳು ದಾನಿಗಳ ನೆರವಿನಿಂದ ನಡೆಸಬೇಕಾಗಿದೆ. ಆ ಆಶ್ರಮಗಳಲ್ಲಿರುವಂತಹ ಅಸಹಾಯಕ ವ್ಯಕ್ತಿಗಳು ಯಾರಿದ್ದಾರೆ. ಅವರಿಗೆ ಸಹಾಯ ಮಾಡುವಂತಹ ನಿಟ್ಟಿನಲ್ಲಿ ಸರ್ಕಾರ ತುರ್ತು ನೆರವಿಗೆ ಬರಬೇಕು. ಇವತ್ತು ಹಣ ಬಿಡುಗಡೆಯಾಗದಿದ್ದರೆ ಲ್ಯಾಪ್ಸ್ ಆಗುವಂತಹ ಸಾಧ್ಯತೆಗಳು ಇರುವುದರಿಂದ ನಾನು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ. ಈ ತಕ್ಷಣವೇ ಹಣವನ್ನು ಬಿಡುಗಡೆ ಮಾಡುವ ಬಗ್ಗೆ ಆಜ್ಞೆಯನ್ನು ಕೊಡಬೇಕೆಂದು ಹೇಳಿ ತಮ್ಮ ಮೂಲಕ ಒತ್ತಾಯ ಮಾಡುತ್ತಿದ್ದೇನೆ.

(ಊ) ರಾಣೆಬೆನ್ನೂರಿನಲ್ಲಿ ದರೋಡೆ

ಶ್ರೀ ಕೆ.ಬಿ. ಕೋಳಿವಾಡ (ರಾಣೆಬೆನ್ನೂರು) : ಮಾನ್ಯ ಅಧ್ಯಕ್ಷರೆ, ನಿನ್ನೆ ಮಧ್ಯರಾತ್ರಿಯಲ್ಲಿ ಸುಮಾರು ಎರಡೂವರೆ ಗಂಟೆಯಲ್ಲಿ ರಾಣೆಬೆನ್ನೂರುನಲ್ಲಿ ಡಾ॥ ಹರಪ್ಪನಹಳ್ಳಿ ಎನ್ನುವವರ ಮನೆಗೆ ದರೋಡೆಕೋರರು ನುಗ್ಗಿ ಅವರ ಮನೆಯಲ್ಲಿರುವಂತಹ ಡಾ : ಹರಪ್ಪನಹಳ್ಳಿಯವರಿಗೆ ಮತ್ತು ಅವರ ಹೆಂಡತಿಗೆ ಕೈಕಾಲುಗಳನ್ನು ಕಟ್ಟಿ ಸುಮಾರು 8- 10 ಲಕ್ಷ ರೂಪಾಯಿಗಳ ಸಾಮಾನುಗಳನ್ನು ತೆಗೆದು ಕೊಂಡು ಹೋಗಿದ್ದಾರೆ. ಇದಕ್ಕೆ ಹಿಂದೆ ಇದೇ ದರೋಡೆಕೋರರು ಒಂದು ಹಳ್ಳಿಯಲ್ಲಿ ಒಬ್ಬರ ಮನೆ ಯನ್ನು ದರೋಡೆ ಮಾಡುವಂತಹ ಸಂದರ್ಭದಲ್ಲಿ ಅಲ್ಲಿನ ಜನರು ಅವರನ್ನು ಹಿಡಿದು ಪೋ ಲೀಸನವರಿಗೆ ಕೊಟ್ಟಿದ್ದಾರೆ, ಮತ್ತೆ ಎರಡನೆಯ ದಿವಸಕ್ಕೆ ಈ ರೀತಿಯಾಗಿ ದರೋಡೆಯಾಗಿದೆ. ಇದಕ್ಕೆ ಪೋಲೀ ಸ್ ನವ ರ ನಿರ್ಲಕ್ಷ್ಯತನದಿಂದ ಈ ದರೋಡೆಗಳು ಹೆಚ್ಚಾಗುತ್ತಿವೆ ಎಂದು ನಾನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಆದುದರಿಂದ ರಾಣೆಬೆನ್ನೂರಿನ ಸುತ್ತಮೂತ್ತಲೂ ಪೋಲೀಸ್ ನವರ ಗಸ್ತು ಚುರುಕಾಗಿ ಕೆಲಸವನ್ನು ಮಾಡಬೇಕಾಗಿದೆ. ನಮ್ಮ ರಾಣೆಬೆನ್ನೂರಿನಲ್ಲಿ ವಾತಾವರಣ ಭಯಾನಕವನ್ನುಟ್ಟಿಸುವಂತಿದೆ ಎನ್ನುವುದನ್ನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ.

(ಋ) ಮೈಸೂರು ಸಕ್ಕರೆ ಕಾರ್ಖಾನೆಗೆ ಸರಬರಾಜು ಮಾಡಿರುವ ಕಬ್ಬಿಗೆ ಹಣ ಪಾವತಿ ಮಾಡದಿರುವುದು

ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ) : ಮಾನ್ಯ ಅಧ್ಯಕ್ಷರೆ, ಮಂಡ್ಯದಲ್ಲಿರುವಂತಹ ಮೈಸೂರ ಸಕ್ಕರೆ ಕಾರ್ಖಾನೆಗೆ ಸರಬರಾಜು ಮಾಡಿರುವಂತಹ ಕಬ್ಬಿಗೆ 2- 3 ತಿಂಗಳುಗಳಿಂದ ಹಣ ಪಾವತಿ ಮಾಡದೆ ರೈತರಿಗೆ ಬಹಳ ತೊಂದರೆಯಾಗಿದೆ. ಇದರಿಂದ ಗಂಭೀರವಾದಂತಹ ಸಮಸ್ಯೆ ಉಂಟಾಗಿದೆ. ಆದುದರಿಂದ ಸರ್ಕಾರ ಈ ಹಣವನು ಶೀಘ್ರವಾಗಿ ಪಾವತಿಯಾಗುವಂತಹ ಒಂದು ಸೂಚನೆಯನ್ನು ನೀ ಡ ಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ವಿನಂತಿಸಿಕೊಳ್ಳುತ್ತೇನೆ.

ಅಧ್ಯಕ್ಷರು : ಈಗ ಮಾನ್ಯ ಮುಖ್ಯಮಂತ್ರಿಯವರು ಸಭೆಯಲ್ಲಿ ಕರ್ನಾಟಕ ರಾಜ್ಯ ಹಣಕಾಸಿಗೆ ಸಂಬಂಧಪಟ್ಟಂತಹ ಶ್ವೇತ ಪತ್ರವನ್ನು ಮಂಡಿಸುತ್ತಾರೆ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ : ಮಾನ್ಯ ಅಧ್ಯಕ್ಷರೇ, ಅದರ ಬಗ್ಗೆ ಚರ್ಚೆ ಮಾಡಬೇಕು.

ಶ್ರೀ ಎಸ್.ಎಂ.ಕೃಷ್ಣ : ಅದರ ಬಗ್ಗೆ ಕೂಲಂಕುಷವಾಗಿ ಚರ್ಚೆ ಮಾಡೋಣ, ಆದರೆ ಅದಕ್ಕೂ ಮೊದಲು ಈ ಪತ್ರವನ್ನು ಟೇಬಲ್ ಮೇಲೆ ಇಡಬೇಕಲ್ಲಾ ನಾನು ಸದನದ ಕ್ಷಮೆಯನ್ನು ಬೇಡುತ್ತಿದ್ದೇನೆ. ಈ ಶ್ವೇತ ಪತ್ರ ಆಂಗ್ಲ ಭಾಷೆಯಲ್ಲಿ ಇದೆ. ಇದನ್ನು ಡಾ॥ ಸಿ.ಡಿ.ಗೋವಿಂದರಾವ್‌ರವರಿಗೆ ಪ್ರಿಪೇರ್ ಮಾಡಲು ಕೊಡಲಾಗಿತ್ತು. ಈಗ ಕನ್ನಡದಲ್ಲಿ ಅನುವಾದ ಆಗುತ್ತಿದೆ.